# 12

# ಹೊಸ ಒಡಂಬಡಿಕೆ – ಒಂದು ನೂತನ ಆರಾಧನೆ

> *“ಅದಿರಲಿ; ಸತ್ಯಭಾವದಿಂದ ದೇವಾರಾಧನೆ ಮಾಡುವವರು ಆತ್ಮೀಯ ರೀತಿಯಲ್ಲಿ ಸತ್ಯಕ್ಕೆ ತಕ್ಕ ಹಾಗೆ ತಂದೆಯನ್ನು ಆರಾಧಿಸುವಕಾಲ ಬರುತ್ತದೆ; ಅದು ಈಗಲೇ ಬಂದಿದೆ; ತಂದೆಯು ತನ್ನನ್ನು ಆರಾಧಿಸುವವರು ಇಂಥವರೇ ಆಗಿರಬೇಕೆಂದು ಅಪೇಕ್ಷಿಸುತ್ತಾನಲ್ಲವೇ. ದೇವರು ಆತ್ಮಸ್ವರೂಪನು; ಆತನನ್ನು ಆರಾಧಿಸುವವರು ಆತ್ಮೀಯ ರೀತಿಯಲ್ಲಿ ಸತ್ಯಕ್ಕೆ ತಕ್ಕ ಹಾಗೆ ಆರಾಧಿಸಬೇಕು” (ಯೋಹಾನ 4:23, 24).*

ಧರ್ಮಶಾಸ್ತ್ರದ ಅಧೀನತೆಯಲ್ಲಿ ದೇವರ ಆರಾಧನೆಯು ಪ್ರಾಣಿಗಳ ಯಜ್ಞದ ಸುತ್ತ ಕಟ್ಟಲ್ಪಟ್ಟಿತ್ತು, ಆದರೆ ನೂತನ ನಿಯಮವು ಆತ್ಮಿಕ ಯಜ್ಞದ ಮೇಲೆ ಕಟ್ಟಲ್ಪಟ್ಟಿತ್ತು. ಕ್ರಿಸ್ತನ ನಿಯಮದ ಕೆಳಗೆ, ನಾವು ನಮ್ಮನ್ನು ಶಿಲುಬೆಗೆ ಹಾಕಿಕೊಳ್ಳಬೇಕು (ರೋಮಾಪುರ 6:4-6; ಗಲಾತ್ಯ 2:20) ಮತ್ತು ಸಜೀವ ಯಜ್ಞಗಳಾಗಬೇಕು (ರೋಮಾಪುರ 12:1). ನಮ್ಮ ಆರಾಧನೆಯು ಆತ್ಮ ಸಂಬಂಧವಾದದ್ದಾಗಿರಬೇಕು. ಅಜಿತ ರೂಪವಾದ ಹಳೇ ನಿಯಮದಂತಿರಬಾರದು (2 ಕೊರಿಂಥ 3:6; ಫಿಲಿಪ್ಪಿ 3:3) ಆತ್ಮಿಕ ಯಜ್ಞಗಳನ್ನು ಅರ್ಪಿಸುವಲ್ಲಿ ಪರಿಣಾಮಗೊಳ್ಳುವಂಥಾದ್ದಾಗಿರಬೇಕು. ಪೇತ್ರನು ಹೀಗೆ ಹೇಳಿದ್ದಾನೆ:

> ನೀವು ಜೀವವುಳ್ಳ ಕಲ್ಲಾಗಿರುವ ಆತನನ್ನು ಸೇರಿಕೊಂಡಿದ್ದೀರಿ. ಆ ಕಲ್ಲನ್ನು ಮನುಷ್ಯರು ನಿರಾಕರಿಸಿದರೂ ದೇವರು ಅದನ್ನು ಆಯಲ್ಪಟ್ಟದ್ದೂ ಮಾನ್ಯವಾದದ್ದೂ ಎಂದು ಎಣಿಸಿದನು. ನೀವೂ ಸಹ ಜೀವವುಳ್ಳ ಕಲ್ಲುಗಳಾಗಿದ್ದು ಆತ್ಮ ಸಂಬಂಧವಾದ ಮಂದಿರವಾಗಲಿಕ್ಕೆ ಕಟ್ಟಲ್ಪಡುತ್ತಾ ಇದ್ದೀರಿ, ಮತ್ತು ಯೇಸು ಕ್ರಿಸ್ತನ ಮೂಲಕ ದೇವರಿಗೆ ಸಮರ್ಪಕವಾದ ಆತ್ಮೀಯ ಯಜ್ಞಗಳನ್ನು ಸಮರ್ಪಿಸುವದಕ್ಕೆ ಪರಿಶುದ್ಧ ಯಾಜಕ ವರ್ಗದವರಾಗಿದ್ದೀರಿ (1 ಪೇತ್ರ 2:4, 5).

ಈ ಯಜ್ಞವು ಮಾನವನ ಆತ್ಮದ ಆಳದಿಂದ ಅರ್ಪಿಸಿದ ಹಾಗೂ ಮಾನವ ತುಟಿಗಳಿಂದ ವ್ಯಕ್ತಪಡಿಸಿದ ಸೋತ್ರವಾಗಿರುತ್ತದೆ. “ಆದದರಿಂದ ಆತನ ಮೂಲಕವಾಗಿಯೇ ದೇವರಿಗೆ ಸ್ತೋತ್ರ ಯಜ್ಞವನ್ನು ಎಡೆಬಿಡದೆ ಸಮರ್ಪಿಸೋಣ. ಅದು ಆತನ ನಾಮಕ್ಕೆ ಸಲ್ಲಿಸುವ ಕೃತಜ್ಞೆತೆಯೆಂಬ ತುಟಿಗಳ ಫಲವೇ ಆಗಿದೆ” (ಇಬ್ರಿಯ 13:15).

## ಒಂದು ಭಿನ್ನವಾದ ಯಜ್ಞ

ಪಾಪ ಮತ್ತು ಅಪರಾಧಕ್ಕಾಗಿ ಪ್ರಾಯಶ್ಚಿತ್ತದಂತೆ ಪ್ರಾಣಿ ಯಜ್ಞಗಳು (ಯಾಜಕಕಾಂಡ 4:1-35; 5:1-19) ಮಾತ್ರವೇ ಧರ್ಮಶಾಸ್ತ್ರದಲ್ಲಿ ಒಳಗೊಂಡ ಅರ್ಪಣೆಗಳಾಗಿರಲಿಲ್ಲ.

ಸಮಾಧಾನ, ಹರಕೆಯ, ಸ್ವೇಚ್ಛೆಯ, ಕೃತಜ್ಞತಾಸ್ತುತಿಯ ಅರ್ಪಣೆಗಳಂಥ ಆರಾಧನೆಯ ಯಜ್ಞಗಳೂ ಹೇಳಲ್ಪಟ್ಟಿದೆ (ಯಾಜಕಕಾಂಡ 3:1-9; 7:11-34). ಇವು "ಎಣ್ಣೆ ಮಿಶ್ರವಾದ ಹುಳಿಯಿಲ್ಲದ ಹೋಳಿಗೆಗಳನ್ನೂ ಎಣ್ಣೆ ಹಾಕಿದ ಹುಳಿಯಿಲ್ಲದ ಕಡುಬುಗಳನ್ನೂ ಎಣ್ಣೆಯಿಂದ ಪೂರಾ ನೆನಸಿದ ಗೋದಿಹಿಟ್ಟಿನ ಹೋಳಿಗೆಗಳನ್ನೂ" ಒಳಗೊಂಡಿದ್ದವು (ಯಾಜಕಕಾಂಡ 7:12). ದೇವರು ಈ ಯಜ್ಞಗಳನ್ನು ಮಾತ್ರವೇ ಬಯಸಲಿಲ್ಲ, ಆದರೆ ಶುದ್ಧ ಜೀವಿತಗಳನ್ನು ಪಶ್ಚಾತ್ತಾಪದ ಹೃದಯಗಳನ್ನೂ ಸಹ ಬಯಸಿದ್ದನು (ಕೀರ್ತನೆ 51:17; ಯೆಶಾಯ 1:11-17).

ಇಸ್ರಾಯೇಲ್ಯರು ಒಡಂಬಡಿಕೆ ಮಂಜೂಷವನ್ನು ಯೆರೂಸಲೇಮಿಗೆ ಹಿಂದಿರುಗಿ ತರುತ್ತಿದ್ದಾಗ, ಪ್ರತಿ ಆರು ಹೆಜ್ಜೆ ನಡೆದ ನಂತರ ಒಂದು ಎತ್ತನ್ನೂ ಕೊಬ್ಬಿದ ಕರುವನ್ನೂ ಅರ್ಪಿಸುವದರಿಂದ ದಾವೀದನು ದೇವರನ್ನು ಆರಾಧಿಸಿದನು (2 ಸಮುವೇಲ 6:13). ಮಂಜೂಷವು ದೇವದರ್ಶನ ಗುಡಾರವನ್ನು ತಲುಪಿದಾಗ ಅವನು ಸರ್ವಾಂಗದ ಹೋಮಗಳನ್ನೂ ಸಮಾಧಾನ ಯಜ್ಞಗಳನ್ನೂ ಸಮರ್ಪಿಸಿದನು (2 ಸಮುವೇಲ 6:17).

ಆರಾಧನೆಯಲ್ಲಿ ಕುಣಿಯುವದನ್ನೂ ವಾದ್ಯ ಸಂಗೀತವನ್ನು ಉಪಯೋಗಿಸುವದನ್ನು ಕೆಲವರು ಸಮರ್ಥಿಸಲು ಪ್ರಯತ್ನಿಸಿದ್ದಾರೆ. ಯಾಕಂದರೆ ಹಳೇ ಒಡಂಬಡಿಕೆಯ ಆ ಸಮಯದಲ್ಲಿ ಜನರು ಇವುಗಳೊಂದಿಗೆ ದೇವರನ್ನು ಆರಾಧಿಸುತ್ತಿದ್ದರು (ಕೀರ್ತನೆ 150:4-6). ಅವರು ಹೀಗೆ ತರ್ಕ ಮಾಡುತ್ತಾರೆ: "ಈಗ ಇವು ಆತನಿಗೆ ಆರಾಧನೆಯಲ್ಲಿ ಸ್ವೀಕಾರ ಯೋಗ್ಯವಾದವುಗಳಾಗಿದ್ದರೆ, ಅವುಗಳನ್ನು ಆತನು ಈಗ ಯಾಕೆ ಸ್ವೀಕರಿಸಬಾರದು?" ಇದೇ ಪ್ರಶ್ನೆಯನ್ನು ಸರ್ವಾಂಗಹೋಮ ಯಜ್ಞದ ಬಗೆಗೂ ಕೇಳ ಬಹುದು, ಆರಾಧನೆಯ ಈ ಪದ್ಧತಿಗಳನ್ನು ಆಗ ದೇವರು ಆಜ್ಞಾಪಿಸಿದನು, ಆದುದರಿಂದ ಈಗ ಆತನು ಅವುಗಳನ್ನು ಯಾಕೆ ಸ್ವೀಕರಿಸಲಾರನು?

ಕೆಲವು ಸಲ ಕೊಡಲ್ಪಟ್ಟ ಒಂದು ಉತ್ತರವು, ಯೇಸುವು ತನ್ನ ಯಜ್ಞವನ್ನು ಅರ್ಪಿಸಿದ್ದರಿಂದ ಆ ಯಜ್ಞಗಳು ಇನ್ನು ಮುಂದೆ ಸ್ವೀಕಾರ ಯೋಗ್ಯವಾದವುಗಳಾಗಿರುವದಿಲ್ಲ ಎಂದು ದೇವರು ಸ್ಪಷ್ಟವಾಗಿ ಹೇಳಿದ್ದಾನೆ ಎಂಬುದು. ಪಾಪಕ್ಕಾಗಿ ಯೇಸುವು ಒಂದು ಯಜ್ಞ ಅರ್ಪಿಸಿದ್ದರಿಂದ ಪಾಪಪರಿಹಾರಕ ಯಜ್ಞಗಳು ಬೇಕಾಗಿಲ್ಲ ಎಂದು ಬೈಬಲ್ ಹೇಳುತ್ತದೆ (ಇಬ್ರಿಯ 7:27; 9:24-28; 10:4, 8, 12, 14), ಆದರೆ ಸರ್ವಾಂಗ ಹೋಮ ಯಜ್ಞಗಳು ಆರಾಧನೆಯಂತೆ ಪ್ರತ್ಯೇಕಿಸಲ್ಪಟ್ಟಿವೆ ಎಂದು ಅದು ಎಲ್ಲಿ ಹೇಳು ತ್ತದೆ? ಧರ್ಮಶಾಸ್ತ್ರವು ಕೊಡಲ್ಪಡುವುದಕ್ಕಿಂತ ಮೊದಲು (ಆದಿಕಾಂಡ 4:4; 8:20; 22:13; 31:54; 46:1; ವಿಮೋಚನಕಾಂಡ 18:12) ಮತ್ತು ಧರ್ಮಶಾಸ್ತ್ರವು ಕೈಕೊ ಳ್ಳಲ್ಪಟ್ಟ ಸಮಯದಲ್ಲಿ ಇವು ಸ್ವೀಕಾರ ಯೋಗ್ಯವಾಗಿದ್ದವು. ಹೊಸ ಒಡಂಬಡಿಕೆಯ ಆರಾಧನೆಯಲ್ಲಿ ಅವು ಎಲ್ಲಿಯೂ ಆಜ್ಞಾಪಿಸಲ್ಪಡದೇ ಇದ್ದುದರಿಂದ ಅವುಗಳನ್ನು ಇಂದು ಆರಾಧನೆಯಲ್ಲಿ ಕೂಡಿಸಲ್ಪಡಬಾರದೆಂದು ಅರ್ಥವಾಗುತ್ತದೆ. ಸರ್ವಾಂಗ ಹೋಮ ವನ್ನು ತೆಗೆದು ಹಾಕಿದ ಅದೇ ತತ್ವವು ಹೊಸ ಒಡಂಬಡಿಕೆಯಲ್ಲಿ ಕೂಡಿಸಲ್ಪಟ್ಟಿರದ ಧರ್ಮಶಾಸ್ತ್ರದ ಅಧೀನತೆಯಲ್ಲಿ ರೂಢಿಸಿದ ಆರಾಧನೆಯ ಯಾವುದೇ ಇತರ ಕ್ರಮಗ ಳನ್ನು ತೆಗೆದು ಹಾಕುತ್ತದೆ. ಮುಂದಿನ ಪಾಠದಲ್ಲಿ ಧರ್ಮಶಾಸ್ತ್ರವು ರದ್ದುಪಡಿಸಲ್ಪಟ್ಟಿದೆ ಎಂಬುದನ್ನು ಬೋಧಿಸುವ ಕೆಲವು ಪರಿಶುದ್ಧ ಬರಹಗಳನ್ನು ನಾವು ಯೋಚಿಸುತ್ತೇವೆ.

## ಒಂದು ಭಿನ್ನವಾದ ಯಾಜಕತ್ವ

ಭೂಲೋಕದ ಯಾಜಕರ ಮುಖಾಂತರ ದೇವರನ್ನು ಆರಾಧಿಸುವುದರ ಬದಲು,

ಕ್ರೈಸ್ತರು ದೇವರ ಯಾಜಕರಾಗಿದ್ದಾರೆ (1 ಪೇತ್ರ 2:9; ಪ್ರಕಟನೆ 1:6; 5:10; 20:6). ನಮ್ಮ ಒಬ್ಬನೇ ಒಬ್ಬನಾದ ಮಧ್ಯಸ್ಥಗಾರನಾದ ಯೇಸುವಿನ ಮುಖಾಂತರ ನಾವು ದೇವರನ್ನು ಆರಾಧಿಸಬಹುದು (1 ತಿಮೊಥೆ 2:5).

ಯಾಜಕತ್ವದಲ್ಲಿಯ ಬದಲಾವಣೆಯ ಬಗ್ಗೆ ಇಬ್ರಿಯ 7:12 ಮಾತಾಡುತ್ತದೆ. ಹಳೇ ನಿಯಮದ ಅಧೀನತೆಯಲ್ಲಿ ಲೇವಿ ಗೋತ್ರದ ಸದಸ್ಯರು ಯಾಜಕರಾಗಿದ್ದರು (ಧರ್ಮೋಪ ದೇಶಕಾಂಡ 21:5), ಈಗ ಕ್ರೈಸ್ತರು ದೇವರ ಮುಂದೆ ಯಾಜಕರಂತೆ ಸೇವೆ ಮಾಡುತ್ತಾರೆ. ನಮ್ಮ ಮಹಾ ಯಾಜಕನಂತೆ ಯೇಸುವಿನೊಂದಿಗೆ (ಇಬ್ರಿಯ 2:17; 4:14, 15; 5:5, 10), ನಾವು ರಾಜವಂಶಸ್ಥರಾದ ಯಾಜಕರಾಗಿದ್ದೇವೆ (1 ಪೇತ್ರ 2:5, 9).

> ಇಂಥವನೇ ನಮಗೆ ಬೇಕಾದ ಮಹಾಯಾಜಕನು. ಈತನು ಪರಿಶುದ್ಧನೂ ನಿರ್ದೋಷಿಯೂ ನಿಷ್ಕಳಂಕನೂ ಪಾಪಿಗಳಲ್ಲಿ ಸೇರದೆ ಪ್ರತ್ಯೇಕವಾಗಿರುವವನೂ ಆಕಾಶ ಮಂಡಲಗಳಿಗಿಂತ ಉನ್ನತದಲ್ಲಿರುವವನೂ ಆಗಿರುವನು. ಮೊದಲು ತಮ್ಮ ಪಾಪಪರಿಹಾರಕ್ಕಾಗಿ ಆ ಮೇಲೆ ಜನರ ಪಾಪಪರಿಹಾರಕ್ಕಾಗಿ ಸಮರ್ಪಣೆ ಮಾಡುವ ಲೇವಿಕ ಮಹಾಯಾಜಕರಂತೆ ಈತನು ಪ್ರತಿನಿತ್ಯವೂ ಸಮರ್ಪಿಸ ಬೇಕಾದ ಅವಶ್ಯವಿಲ್ಲ. ಈತನು ತನ್ನನ್ನೇ ಸಮರ್ಪಿಸಿಕೊಂಡು ಒಂದೇ ಸಾರಿ ಆ ಕೆಲಸವನ್ನು ಮಾಡಿ ಮುಗಿಸಿದನು (ಇಬ್ರಿಯ 7:26, 27).

## ಒಂದು ಭಿನ್ನವಾದ ಮಾರ್ಗ

### ಯಾವುದೇ ಸ್ಥಳದಲ್ಲಿ

ಇನ್ನು ಮುಂದೆ ಆರಾಧನೆಯು ಯೆರೂಸಲೇಮಿಗೂ ಅಲ್ಲಿ ಆಚರಿಸಲ್ಪಡುವ ಧರ್ಮಾಚರಣೆಗಳಿಗೂ ಮಿತಿಗೊಳ್ಳಲ್ಪಟ್ಟಿರುವದಿಲ್ಲವೆಂದು ಯೇಸು ಬೋಧಿಸಿದನು, ಆರಾಧನೆಯು ಆತ್ಮದಲ್ಲಿಯೂ ಸತ್ಯದಲ್ಲಿಯೂ ಇರುವದೆಂದೂ ಆತನು ಹೇಳಿದನು. (ಯೋಹಾನ 4:23, 24). ಯೇಸುವಿನ ಪ್ರಕಾರವಾಗಿ, ದೇವರನ್ನು ಆರಾಧಿಸಲು ನೂತನ ದಿನವು ಉದಯವಾಗುತ್ತಲಿರುವುದು. ಧರ್ಮಶಾಸ್ತ್ರಕ್ಕೆ, ಯೆರೂಸಲೇಮಿಗೆ ಮತ್ತು ಅಲ್ಲಿ ಅರ್ಪಿಸಲ್ಪಡುತ್ತಿರುವ ಆರಾಧನೆಯ ನೆರಳಿಗೆ ನೋಡುವದರ ಬದಲು (ಇಬ್ರಿಯ 8:5), ದೇವರಿಗೆ ಸ್ವೀಕಾರಯೋಗ್ಯವಾದ ಆರಾಧನೆಯು ಯೇಸು ಕ್ರಿಸ್ತನ ಮುಖಾಂತರ ಪ್ರಕಟವಾದ ಸತ್ಯಕ್ಕನುಗುಣವಾದದ್ದಾಗಿರುವುದು (ಯೋಹಾನ 1:17). ದೇವರು ಇಸ್ರಾಯೇಲ್ಯರಿಗೆ ಒದಗಿಸಿದ ಆರಾಧನೆಯ ಪದ್ಧತಿಗಳನ್ನು ಇನ್ನೆಂದೂ ಸ್ವೀಕರಿಸುವದಿಲ್ಲ.

### ಆತ್ಮದಲ್ಲಿ

ಧರ್ಮಶಾಸ್ತ್ರದ ಅಧೀನತೆಯಲ್ಲಿ ಹೃದಯವು ಒತ್ತಿ ಹೇಳಲ್ಪಡದಿದ್ದರೂ ದೇವರು ಯಾವಾಗಲೂ ಆರಾಧನೆಯು ಹೃದಯದಿಂದ, ಮಾನವ ಆತ್ಮದ ಆಳದಿಂದ ಬರುವದನ್ನು ಅಪೇಕ್ಷಿಸಿದನು. ಹೊಸ ಒಡಂಬಡಿಕೆಯ ಆರಾಧಕರು ಆತ್ಮದಲ್ಲಿ ಮತ್ತು ಸತ್ಯದಲ್ಲಿ ಆರಾಧಿಸತಕ್ಕದ್ದು, ಯಾಕಂದರೆ ತಂದೆಯು ತನ್ನನ್ನು ಆರಾಧಿಸಲು ಅಂಥವರನ್ನು ಹುಡುಕುತ್ತಾನೆ (ಯೋಹಾನ 4:23, 34). ಯೇಸು "ತಕ್ಕದ್ದು" ಎಂಬ ಪದ ಉಪಯೋಗಿಸಿದ್ದು ಬೇರೆ ಆಯ್ಕೆಯು ಉಪಯೋಗಿಸಲ್ಪಡಬಾರದೆಂದು

ಸೂಚಿಸುತ್ತದೆ. ಎಲ್ಲಾ ಆರಾಧನೆಯು ಈ ಪರಿಮಿತಿಗಳೊಳಗೆ ಇರತಕ್ಕದ್ದು.

ಆತ್ಮದಲ್ಲಿ ಆರಾಧನೆಯು ಮಾನವನ ಆತ್ಮದಲ್ಲಿ ಪ್ರಾರಂಭವಾಗುವ ಹಾಗೂ ಅದರಲ್ಲಿ ವ್ಯಕ್ತಪಡಿಸುವ ಆರಾಧನೆ ಯಾಗಿರುತ್ತದೆ. ದೇವರಿಗೆ ಆರಾಧನೆಯನ್ನು ವ್ಯಕ್ತಪಡಿಸಲು ಅಂತರ್ಯದಿಂದ ನಿರಂತರ ಪ್ರಯತ್ನವಿಲ್ಲದಿದ್ದರೆ ಆರಾಧನೆಯ ಭಾವನೆಗಳು ಬರಿದಾದವುಗಳೂ ದೇವರಿಗೆ ಸ್ವೀಕರಿಸಲು ಯೋಗ್ಯವಲ್ಲದವುಗಳೂ ಆಗುವವು. ಆತನು ಬಾಹ್ಯವಾದ, ದೈಹಿಕ ಕೃತ್ಯಗಳಲ್ಲಿ ಆಸಕ್ತನಾಗಿರುವದಿಲ್ಲ. ಆರಾಧನೆಯು ಆತ್ಮದಿಂದಲೂ ಹೃದಯದಿಂದಲೂ ಬರತಕ್ಕದ್ದು (ಎಫೆಸ 5:19).

**ಸತ್ಯದಲ್ಲಿ**

ಆರಾಧನೆಯು ಆತ್ಮದಲ್ಲಿ ಇರತಕ್ಕದ್ದು ಅಷ್ಟೇ ಅಲ್ಲ, ಅದು ಸತ್ಯದಲ್ಲಿಯೂ ಇರತಕ್ಕದ್ದು. ಸತ್ಯವು ಯೇಸುವಿನ ಮುಖಾಂತರ ಬಂದಿರುತ್ತದೆ (ಯೋಹಾನ 1:14, 17; 8:31, 32; 14:6; ಎಫೆಸ 4:21). ಸತ್ಯವು ತಂದೆಯೊಂದಿಗೆ ಉತ್ಪತ್ತಿಯಾದದ್ದು (ಯೋಹಾನ 17:17; ನೋಡಿರಿ ಯೋಹಾನ 12:49, 50). ಅಪೊಸ್ತಲರು ಯೇಸುವಿನಿಂದ ಕೇಳಿದ ಸತ್ಯವನ್ನು ಪರಿಶುದ್ಧಾತ್ಮನು ಅವರ ಮನಸ್ಸುಗಳಿಗೆ ತಂದನು (ಯೋಹಾನ 14:26) ಮತ್ತು ಅವರನ್ನು ಎಲ್ಲಾ ಸತ್ಯದಲ್ಲಿ ನಡಿಸಿದನು (ಯೋಹಾನ 16:13). ಈಗ ನಾವು ಕ್ರಿಸ್ತನಲ್ಲಿ ಪರಿಪೂರ್ಣರಾಗಿದ್ದೇವೆ (ಕೊಲೊಸ್ಸೆ 2:10), ಆತನಲ್ಲಿ ಜ್ಞಾನದ ಮತ್ತು ತಿಳುವಳಿಕೆಯ ಎಲ್ಲಾ ನಿಧಿಗಳು ಅಡಗಿಸಲ್ಪಟ್ಟಿವೆ (ಕೊಲೊಸ್ಸೆ 2:3), ಈ ಕಾರಣದಿಂದ ದೇವರ ಆರಾಧನೆಯಲ್ಲಿ ಮಾನವ ಸಾಂಪ್ರದಾಯಗಳು ಉಪಯೋಗಿಸಲ್ಪಟ್ಟಾಗ ಅವು ನಿರುಪಯೋಗಿಗಳಾಗುತ್ತವೆ (ಮತ್ತಾಯ 15:7-9; ಮಾರ್ಕ 7:6-13; ಕೊಲೊಸ್ಸೆ 2:8; ತೀತ 1:14).

ಹೊಸ ಒಡಂಬಡಿಕೆಯ ಆರಾಧನೆಯು ಅಪೊಸ್ತಲರ ಬೋಧನೆಯಲ್ಲಿ, ಪ್ರಾರ್ಥನೆಯಲ್ಲಿ (ಅಪೊಸ್ತಲರ ಕೃತ್ಯಗಳು 2:42) ಕರ್ತನ ಭೋಜನದಲ್ಲಿ ಯೇಸುವನ್ನು ಜ್ಞಾಪಿಸಿಕೊಳ್ಳುವುದರಲ್ಲಿ (1 ಕೊರಿಂಥ 11:23-26), ಕರ್ತನಿಗೆ ಹೃದಯದಲ್ಲಿ ಸಂಗೀತ ಹಾಡಿ ಉಲ್ಲಾಸಿಸುವುದರಲ್ಲಿ (ಎಫೆಸ 5:19; ಕೊಲೊಸ್ಸೆ 3:16) ಮತ್ತು ನಮ್ಮ ಹೃದಯಗಳಲ್ಲಿ ಉದ್ದೇಶಿಸಿದಂತೆ ಕೊಡುವದರಲ್ಲಿ (2 ಕೊರಿಂಥ 9:7) ಮುಂದುವರಿಯುವದನ್ನು ಒಳಗೊಂಡಿರುತ್ತದೆ. ಆರಾಧನೆಯ ಬಾಹ್ಯ ರೂಪಗಳು ದೇವರನ್ನು ಆರಾಧಿಸುವಲ್ಲಿ ಆತ್ಮನಿಂದ ಕೂಡಿಸಲ್ಪಡದಿದ್ದರೆ ದೇವರಿಗೆ ಸ್ವೀಕಾರ ಯೋಗ್ಯವಾದವುಗಳಾಗಿರುವದಿಲ್ಲ.

**ದಶಮಾಂಶ ಕೊಡದೇ**

ಧರ್ಮಶಾಸ್ತ್ರದ ಅಧೀನತೆಯಲ್ಲಿ ಒಬ್ಬನ ಕೊಡುಗೆಯ ಮೊತ್ತವು ದಶಮಾಂಶವಾಗಿತ್ತು - ಒಬ್ಬನು ಹೊಂದುವ ಪ್ರತಿಯೊಂದರಲ್ಲಿ ಹತ್ತನೆಯ ಭಾಗವಾಗಿತ್ತು. ಇದನ್ನು ಸ್ವೇಚ್ಛೆಯ ಕೊಡುಗೆಯಾಗಿ ಅಲ್ಲ ಆದರೆ ಕೊಡಬೇಕಾದ ಹಂಗಿನಂತೆ ಕೊಡಬೇಕಾಗಿತ್ತು. ದಶಮಾಂಶವು ಲೇವಿಗೋತ್ರದವರಿಗೆ ಸಹಾಯಾರ್ಥವಾಗಿ ಕೊಡಬೇಕಾಗಿತ್ತು.

> ಲೇವಿಯರು ದೇವದರ್ಶನದ ಗುಡಾರದ ಪರಿಚರ್ಯವನ್ನು ಮಾಡುವದಕ್ಕಾಗಿ ಇಸ್ರಾಯೇಲ್ಯರಿಂದ [ಸಕಲ ಪದಾರ್ಥಗಳ] ಹತ್ತನೆಯ ಪಾಲನ್ನು ಗೊತ್ತುಮಾಡಿ ಕೊಂಡಿದ್ದೇನೆ ... ಇಸ್ರಾಯೇಲ್ಯರು ಪ್ರತ್ಯೇಕಿಸಿ ಯೆಹೋವನಿಗೆ ಸಮರ್ಪಿಸುವ ಹತ್ತನೆಯ ಪಾಲನ್ನೆ ಲೇವಿಯರಿಗೆ ಸ್ವಾಸ್ತ್ಯವಾಗಿ ಕೊಟ್ಟಿದ್ದೇನಲ್ಲಾ, "ಇವರಿಗೆ

ಇಸ್ರಾಯೇಲ್ಯರೊಂದಿಗೆ ಪಾಲು ದೊರೆಯುವದಲ್ಲವೆಂದು ನಾನು ಹೇಳಿದ ಮಾತಿಗೆ ಇದೇ ಕಾರಣ" (ಅರಣ್ಯಕಾಂಡ 18:21, 24).

ದೇಶವು ವಿಭಾಗಿಸಲ್ಪಟ್ಟಾಗ, ಲೇವಿ ಕುಲದವರಿಗೆ ಯಾವುದೇ ಭೂಮಿಯು ಸ್ವಾಸ್ತ್ಯವಾಗಿ ಕೊಡಲ್ಪಡಲಿಲ್ಲ (ನೆಹೆಮೀಯ 18:20). ಆದುದರಿಂದ, ದಶಮಾಂಶಗಳನ್ನು ಬಿಟ್ಟು ಬೇರೆ ಯಾವ ಸಹಾಯಗಳಿರಲಿಲ್ಲ. ಲೇವಿಯರಿಗೆ ಸಹಾಯ ಮಾಡಲು ಇಸ್ರಾಯೇಲ ಜನರಿಂದ ಈ ದಶಮಾಂಶಗಳು ತೆಗೆದುಕೊಳ್ಳಲ್ಪಡುತ್ತಿದ್ದವು (ಅರಣ್ಯಕಾಂಡ 18:26).

ಧರ್ಮಶಾಸ್ತ್ರವು ಕೊಡಲ್ಪಡುವ ಮೊದಲು, ಅಬ್ರಹಾಮನು ಸಾಲೇಮಿನ ಅರಸನಾದ ಮೆಲ್ಕಿಜೆದೆಕನಿಗೆ ದಶಮಾಂಶ ಕೊಟ್ಟನು (ಆದಿಕಾಂಡ 14:20). ದೇವರು ತನ್ನನ್ನು ಆಶೀರ್ವದಿಸಿದರೆ ದೇವರಿಗೆ ದಶಮಾಂಶವನ್ನು ಕೊಡುವೆನೆಂದು ಯಾಕೋಬನು ವಾಗ್ದಾನ ಮಾಡಿದನು (ಆದಿಕಾಂಡ 28:20-22). ಈ ಜನರು ಕರ್ತನಿಗೆ ಹತ್ತನೆಯ ಭಾಗವನ್ನು ಕೊಟ್ಟರೂ ಮತ್ತು ಧರ್ಮಶಾಸ್ತ್ರವು ದಶಮಾಂಶವನ್ನು ಕೇಳಿದರೂ, ಹೊಸ ಒಡಂಬಡಿಕೆಯು ಹತ್ತನೆಯ ಭಾಗವನ್ನು ಕೊಡುವದನ್ನು ನಿರ್ದಿಷ್ಟೆಗೊಳಿಸಿರುವದಿಲ್ಲ. ನಮ್ಮನ್ನು ದೇವರು ಸಮೃದ್ಧಿಗೊಳಿಸಿದಂತೆ ಈಗ ನಾವು ಕೊಡಬೇಕು (1 ಕೊರಿಂಥ 16:2). ನಮ್ಮ ಹೃದಯಗಳಲ್ಲಿ ಉದ್ದೇಶಿಸಿದಂತೆ ನಾವು ಸಂತೋಷದಿಂದ ಕೊಡಬೇಕು (2 ಕೊರಿಂಥ 9:7).

## ಮುಕ್ತಾಯ

ಹೊಸ ಒಡಂಬಡಿಕೆಗೆ ದೇವರು ಇಸ್ರಾಯೇಲ್ಯರಿಗೆ ಕೊಟ್ಟ ಧರ್ಮಶಾಸ್ತ್ರಕ್ಕಿದ್ದ ಅದೇ ರೀತಿಯ ನಿಯಮಗಳಿರಲಿಲ್ಲ. ದೇವರು ನಮಗೆ ಜವಾಬ್ದಾರಿಕೆಗಳನ್ನು ಕೊಟ್ಟಿದ್ದಾನೆ. ಆದರೆ ನಾವು ಎಷ್ಟು ಹೆಚ್ಚು ಇಲ್ಲವೇ ಎಷ್ಟು ಸ್ವಲ್ಪ ಮಾಡಬೇಕೆಂದು ಹೇಳಿರುವದಿಲ್ಲ. ನಾವು ಹೀಗೆ ಚೆನ್ನಾಗಿ ಸೇವೆ ಮಾಡಬೇಕೆಂಬುದನ್ನು ನಮ್ಮ ಹೃದಯಗಳಲ್ಲಿ ನಿರ್ಧರಿಸಿಕೊಳ್ಳಬೇಕು. ನಾವು ಏನೂ ಸೇವೆ ಮಾಡದಿದ್ದರೆ, ಅದು ನಾವು ನಮ್ಮನ್ನು ಮಿತಿಗೊಳಿಸಿಕೊಂಡದ್ದರ ಕಾರಣವಾಗಿರುತ್ತದೆ; ನಾವು ಬಹಳವಾಗಿ ಸೇವೆಮಾಡಿದರೆ, ಅದಕ್ಕೆ ಕಾರಣ ದೇವರಿಗೆ ಹೆಚ್ಚು ಸೇವೆಮಾಡಲು ಅಪೇಕ್ಷಿಸುವಂಥದ್ದಾಗಿರುತ್ತದೆ. ನಮಗೆ ನಮ್ಮ ಹೃದಯಗಳು ಮಾಡುವದಕ್ಕೆ ಪ್ರೇರೇಪಿಸುವದರ ತಳಹದಿಯ ಮೇಲೆ (1 ಕೊರಿಂಥ 4:5) ನ್ಯಾಯ ತೀರಿಸಲ್ಪಡುವುದು (ರೋಮಾಪುರ 2:6; 2 ಕೊರಿಂಥ 5:10; 1 ಪೇತ್ರ 1:17). ದೇವರು ನಮ್ಮ ಹೃದಯಗಳನ್ನು ಪರೀಕ್ಷಿಸುವನು (1 ಥೆಸಲೊನೀಕ 2:4) ಮತ್ತು ನಮ್ಮ ಕಾರ್ಯಗಳಿಂದ ನಮಗೆ ನ್ಯಾಯತೀರಿಸುವನು (ರೋಮಾಪುರ 2:6; 1 ಪೇತ್ರ 1:17).

ಅಪೊಸ್ತಲರ ಕೃತ್ಯಗಳು 15:29ರಲ್ಲಿ ಪ್ರಕಟವಾದಂತೆ ನಮ್ಮ ಕೃತ್ಯಗಳಿಗಾಗಿ ದೇವರು ಮೇರೆಗಳನ್ನು ನೇಮಿಸುವನು. ಹಾಗಿದ್ದರೂ, ನಾವು ಎಷ್ಟು ಕೊಡಬೇಕು, ಹಾಡಬೇಕು, ಪ್ರಾರ್ಥಿಸಬೇಕು, ಅಧ್ಯಯನ ಮಾಡಬೇಕು, ಅಗತ್ಯತೆಯಲ್ಲಿರುವವರಿಗೆ ಸಹಾಯ ಮಾಡಬೇಕು ಎಂಬುದು ಬಂದಾಗ, ದೇವರ ವಾಕ್ಯದಿಂದ ನಡೆಸಲ್ಪಟ್ಟು ನಮ್ಮ ಹೃದಯಗಳು ನಮ್ಮನ್ನು ಆಳಬೇಕು. ಧರ್ಮಶಾಸ್ತ್ರದಲ್ಲಿ ಇಲ್ಲದಿದ್ದಂಥ ಸ್ವಾತಂತ್ರ್ಯವು ನಮಗಿದೆ.

© 2009 Truth for Today